ಕರ್ನಾಟಕ ಸರ್ಕಾರ

ISO 9001:2008 Certfied

**Govt.of Karnataka**

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಧಾರವಾಡ ಜಿಲ್ಲೆ, ಧಾರವಾಡ-580 001

OFFICE OF THE DEPUTY COMMISSIONER, DHARWAD DISTRICT, DHARWAD-580 001

ದೂರವಾಣಿ / Telephone 0836-2233840,2233880 FAX: 0836- 2747102

E-mail : deo.dharwad@gmail.com

ನಂ.ಎಲ್ಎನ್ಎ/ಸಿಆರ್-398/2012-13 ದಿನಾಂಕ 11-10-2013

## ಅನುಬಂಧ-5 ಅಧಿಕೃತ ಜ್ಞಾಪನಾ

ವಿಷಯ:- ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲೂಕು ಹುಬ್ಬಳ್ಳಿ ಹೋಬಳಿ ಗೋಕುಲ ಗ್ರಾಮದ ಸರ್ವೆ/ಬ್ಲಾಕ್ ನಂಬರ 149 ರಲ್ಲಿ ಕ್ಷೇತ್ರ 08-ಎ 10-ಗುಂ 151 ರಲ್ಲಿ ಕ್ಷೇತ್ರ 01-ಎ 11-ಗುಂ 153 ರಲ್ಲಿ ಕ್ಷೇತ್ರ 37-ಗುಂ ಒಟ್ಟು ಕ್ಷೇತ್ರ 10-ಎ 18-ಗುಂ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡುವ ಕುರಿತು.

ಉಲ್ಲೇಖ:-
1 ಸರಕಾರದ ಸುತ್ತೋಲೆ ಕ್ರ: ಆರ್‌ಡಿ/56/ಎಲ್‌ಜಿಪಿ/2008, ದಿ. 10-09-2008
2 ಸರಕಾರದ ಸುತ್ತೋಲೆ ಕ್ರ: ಆರ್‌ಡಿ/07/ಎಲ್‌ಜಿಪಿ/1995, ದಿ. 07-06-1999.
3. 1. ಶ್ರೀ. ಮಹಮ್ಮದಆಸೀಫ ನಿಜಾಮುದ್ದೀನ ದರೂದವಾಲೆ (ಸರ್ವೆ ನಂಬರ 149 ಕ್ಷೇತ್ರ 02-ಎ) 2. ಶ್ರೀ.ಸುಧೀರ ಶಿವಪ್ಪ ಮುದ್ದಿ (ಸರ್ವೆ ನಂಬರ 149 ಕ್ಷೇತ್ರ 02-ಎ 07-ಗುಂ) 3. ಶ್ರೀ.ಮಹಮ್ಮದಶರೀಫ ಅಬ್ದುಲಕರೀಮ ಚಾಮುಂಡಿ (ಸರ್ವೆ ನಂಬರ 149 ಕ್ಷೇತ್ರ 04-ಎ) 4. ಶ್ರೀ. ನೂಹಾ ಶೇಖ ಬಿನ್ ನೂಹಾ ಶೇಖ ಜಹಾಂಗೀರ (ಸರ್ವೆ ನಂಬರ 151) 5. ಶ್ರೀ. ಆದಮಖಾನ ಅಸುದುಲ್ಲಾಖಾನ ಕುಜ್ಜೋಡಿ (ಸರ್ವೆ ನಂಬರ 153) ಸಾ: ಶಬರಿನಗರ, ಹುಬ್ಬಳ್ಳಿ ಇವರ ಅರ್ಜಿ ದಿನಾಂಕ 23-01-2013
4 ತಹಶೀಲದಾರ ಹುಬ್ಬಳ್ಳಿ ಇವರ ವರದಿ ಸಂಖ್ಯೆ ಎಲ್ಎನ್ಎ/ಸಿಆರ್-206/2012-13 ದಿನಾಂಕ 22-03-2013 ಮತ್ತು 07-09-2013
5 ಆಯುಕ್ತರು ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ, ಹುಬ್ಬಳ್ಳಿ ಇವರ ವರದಿ ನಂ. ಹುಧಾನಪ್ರಾ:ಯೋವಿ:ಬಿನ್‌ಶೇತ್ಕಿ: 105/12-13/5027 ದಿನಾಂಕ 07-02-2013

ಪ್ರಸ್ತಾವನೆ:

1. ಶ್ರೀ. ಮಹಮ್ಮದಆಸೀಫ ನಿಜಾಮುದ್ದೀನ ದರೂದವಾಲೆ (ಸರ್ವೆ ನಂಬರ 149 ಕ್ಷೇತ್ರ 02-ಎ) 2. ಶ್ರೀ.ಸುಧೀರ ಶಿವಪ್ಪ ಮುದ್ದಿ (ಸರ್ವೆ ನಂಬರ 149 ಕ್ಷೇತ್ರ 02-ಎ 07-ಗುಂ) 3. ಶ್ರೀ. ಮಹಮ್ಮದಶರೀಫ ಅಬ್ದುಲಕರೀಮ ಚಾಮುಂಡಿ (ಸರ್ವೆ ನಂಬರ 149 ಕ್ಷೇತ್ರ 04-ಎ) 4. ಶ್ರೀ. ನೂಹಾ ಶೇಖ ಬಿನ್ ನೂಹಾ ಶೇಖ ಜಹಾಂಗೀರ (ಸರ್ವೆ ನಂಬರ 151) 5. ಶ್ರೀ. ಆದಮಖಾನ ಅಸುದುಲ್ಲಾಖಾನ ಕುಜ್ಜೋಡಿ (ಸರ್ವೆ ನಂಬರ 153) ಸಾ: ಶಬರಿನಗರ, ಹುಬ್ಬಳ್ಳಿ ಇವರು ದಿನಾಂಕ 23-01-2013 ರಂದು ಈ ಕೆಳಕಂಡ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಲು ಕೋರಿರುತ್ತಾರೆ.

| ತಾಲೂಕ | ಗ್ರಾಮ | ಸರ್ವೆ ನಂಬರ/ಬ್ಲಾಕ್ ನಂಬರ | ಒಟ್ಟು ಕ್ಷೇತ್ರ ಎ-ಗುಂ-ಆ | ಭೂ ಪರಿವರ್ತನೆಗೆ ಕೋರಿದ ಕ್ಷೇತ್ರ ಎ-ಗುಂ-ಆ |
|---|---|---|---|---|
| ಹುಬ್ಬಳ್ಳಿ | ಗೋಕುಲ | 149<br>151 | 08-10-00<br>01-11-00 | 08-10-00<br>01-11-00 |

| | | | | |
|---|---|---|---|---|
| | | 153 | 00-37-00 | 00-37-00 |
| | | ಒಟ್ಟು | 10-18-00 | 10-18-00 |

ಪ್ರಕರಣದಲ್ಲಿ ತಹಶೀಲದಾರ **ಹುಬ್ಬಳ್ಳಿ** ಹಾಗೂ **ಆಯುಕ್ತರು ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ, ಹುಬ್ಬಳ್ಳಿ** ಇವರಿಗೆ ಸ್ಥಳ ಪರಿಶೀಲನೆಯಿಂದ ದಾಖಲೆಗಳೊಂದಿಗೆ ಅಭಿಪ್ರಾಯ ವರದಿ ಸಲ್ಲಿಸಲು ಕೋರಲಾಗಿತ್ತು.

ತಹಶೀಲದಾರ **ಹುಬ್ಬಳ್ಳಿ** ಇವರು ಉಲ್ಲೇಖ (4)ರ ದಿನಾಂಕ **22-03-2013** ತಮ್ಮ ವರದಿಯಲ್ಲಿ ಪ್ರಸ್ತಾಪಿತ ಜಮೀನನ್ನು **ವಸತಿ** ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಬಹುದಾಗಿ ವರದಿ ಸಲ್ಲಿಸಿರುತ್ತಾರೆ. ಅದರಂತೆ **ಆಯುಕ್ತರು ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ, ಹುಬ್ಬಳ್ಳಿ** ಉಲ್ಲೇಖ (5) ರ ತಮ್ಮ ವರದಿಯಲ್ಲಿ ಪ್ರಸ್ತಾಪಿತ ಜಮೀನನ್ನು **ವಸತಿ** ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಬಹುದಾಗಿ ತಾಂತ್ರಿಕ ಅಭಿಪ್ರಾಯ ನೀಡಿರುತ್ತಾರೆ.

ಪ್ರಕರಣದಲ್ಲಿನ ದಾಖಲೆಗಳನ್ನು ಹಾಗೂ ಸಂಬಂಧಿಸಿದ ಅಧಿಕಾರಿಗಳ ಅಭಿಪ್ರಾಯ ವರದಿ ಪರಿಶೀಲಿಸಿದ ನಂತರ ಅರ್ಜಿದಾರರಿಗೆ ಭೂ ಪರಿವರ್ತನಾ ಶುಲ್ಕ **ರೂ. 341506-00** ಪೋಡಿ ಶುಲ್ಕ **ರೂ.14630-00** ಪೋಟ ಖರಾಬ ದಂಡ ರೂ. 17100-00 ಒಟ್ಟು **ರೂ. 373236-00** ಭರಣಾ ಮಾಡುವಂತೆ ದಿನಾಂಕ **08-08-2013** ರಂದು ಅನುಬಂಧ-3 ರಲ್ಲಿ ತಿಳುವಳಿಕೆ ಪತ್ರ ನೀಡಿದ್ದು ಇರುತ್ತದೆ. ಅದರನ್ವಯ ಅರ್ಜಿದಾರರು ಪೂರ್ಣ ಶುಲ್ಕವನ್ನು ಚಲನ ನಂ. **72 ದಿನಾಂಕ 22-08-2013 ರ** ಮೂಲಕ ಸರಕಾರಕ್ಕೆ ಭರಣಾ ಮಾಡಿ ಚಲನ ಮತ್ತು ಕರಾರು (ಅನುಬಂಧ-4) ಗಳನ್ನು ತಹಶೀಲದಾರ **ಹುಬ್ಬಳ್ಳಿ** ರವರ ಮೂಲಕ ಸಲ್ಲಿಸಿರುತ್ತಾರೆ. ಕಾರಣ ಈ ಕೆಳಗಿನಂತೆ ಆದೇಶ ಮಾಡಿದೆ.

**ಆದೇಶ**

ನಂ. ಎಲ್‌ಎನ್‌ಎ/ಸಿಆರ್-398/2012-13 ದಿನಾಂಕ: 11-10-2013

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ **ಹುಬ್ಬಳ್ಳಿ** ತಾಲೂಕು **ಹುಬ್ಬಳ್ಳಿ** ಹೋಬಳಿ **ಗೋಕುಲ** ಗ್ರಾಮದ ಸರ್ವೆ/ಬ್ಲಾಕ್ ನಂಬರ **149** ರಲ್ಲಿ ಕ್ಷೇತ್ರ **08-ಎ 10-ಗುಂ 151** ರಲ್ಲಿ ಕ್ಷೇತ್ರ **01-ಎ 11-ಗುಂ 153** ರಲ್ಲಿ ಕ್ಷೇತ್ರ **37-ಗುಂ** ಒಟ್ಟು ಕ್ಷೇತ್ರ **10-ಎ 18-ಗುಂ** ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ **ವಸತಿ** ಉದ್ದೇಶಕ್ಕಾಗಿ ಈ ಕೆಳಗೆ ಕಾಣಿಸಿದ ಶರತ್ತುಗಳನ್ನು ವಿಧಿಸಿ ಭೂ ಪರಿವರ್ತನೆಗೆ ಆದೇಶಿಸಿದೆ.

**ಶರತ್ತುಗಳು**

1. ಅರ್ಜಿದಾರರು ಭೂ ಪರಿವರ್ತನೆಗೆ ಕೋರಿದ ಕ್ಷೇತ್ರವು ತಹಶೀಲದಾರರು ಹಾಜರ ಪಡಿಸಿದ ಪಿ.ಟಿ.ಶೀಟ ಅನ್ವಯ ಚಕ್‌ಬಂದಿ ಷಡ್ಯೂಲ್ ವಿವರ :-

| | ಸರ್ವೆ ನಂಬರ 149 | ಸರ್ವೆ ನಂಬರ 151 |
|---|---|---|
| ಪೂರ್ವಕ್ಕೆ | ಲಾಗೂ ಸರ್ವೆ ನಂಬರ 148 | ಲಾಗೂ ಸರ್ವೆ ನಂಬರ 148 |
| ಪಶ್ಚಿಮಕ್ಕೆ | ಲಾಗೂ ಸರ್ವೆ ನಂಬರ 150/2 | ಲಾಗೂ ಸರ್ವೆ ನಂಬರ 150 |
| ಉತ್ತರಕ್ಕೆ | ರಸ್ತೆ | ಲಾಗೂ ಸರ್ವೆ ನಂಬರ 149, 148 |
| ದಕ್ಷಿಣಕ್ಕೆ | ಲಾಗೂ ಸರ್ವೆ ನಂಬರ 151 | ಲಾಗೂ ಸರ್ವೆ ನಂಬರ 152, 153 |

| | ಸರ್ವೆ ನಂಬರ 153 |
|---|---|
| ಪೂರ್ವಕ್ಕೆ | ಲಾಗೂ ಸರ್ವೆ ನಂಬರ 148 |
| ಪಶ್ಚಿಮಕ್ಕೆ | ಲಾಗೂ ಸರ್ವೆ ನಂಬರ 152 |
| ಉತ್ತರಕ್ಕೆ | ಲಾಗೂ ಸರ್ವೆ ನಂಬರ 151 |
| ದಕ್ಷಿಣಕ್ಕೆ | ಲಾಗೂ ಸರ್ವೆ ನಂಬರ 154 |

2. ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ ಹು.ಧಾ.ನ.ಪ್ರಾ/ನಗರ ಯೋಜನಾ ಸಹಾಯಕ ನಿರ್ದೇಶಕರು/ಸಿ.ಎಂ.ಸಿ/ಟಿ.ಎಂ.ಸಿ/ಮಾಲಿನ್ಯ ನಿಯಂತ್ರಣ ಮಂಡಳಿ/ಗ್ರಾಮ ಪಂಚಾಯತಿಗಳಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು

3. ಭೂ ಪರಿವರ್ತನೆ ಜಮೀನನ್ನು **ವಸತಿ** ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೇ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.
4. ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಿಗೆ ಇತ್ಯಾದಿಗಳನ್ನು **ಆಯುಕ್ತರು ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ, ಹುಬ್ಬಳ್ಳಿ** (ಪ್ರಾಧಿಕಾರ/ನಗರ ಯೋಜನಾ ಸಹಾಯಕ ನಿರ್ದೇಶಕರು/ಇತ್ಯಾದಿ) ರವರಿಂದ ಅನುಮೋದಿಸಿಕೊಂಡು ಆ ನಂತರ ಅನುಮೋದಿತಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡಗಳನ್ನು ಕಟ್ಟುವುದು ಮತ್ತು ಸದರಿ ಜಮೀನಿನಲ್ಲಿ ಲೇಔಟ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.
5. ಇತರ ಅವಶ್ಯಕವಾದ ರಸ್ತೆ ಜಾಗ, ರಸ್ತೆ ಮಾರ್ಜಿನ ಖಾಲಿ ಜಾಗ, ಇತ್ಯಾದಿಗಳನ್ನು **ಆಯುಕ್ತರು ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ, ಹುಬ್ಬಳ್ಳಿ** (ಪ್ರಾಧಿಕಾರ/ನಯೋಸನಿಘಾ/ಇತ್ಯಾದಿ) ರವರಿಂದ ಅನಮೋದಿಸಲ್ಪಟ್ಟ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ಧಿಷ್ಟ ಪಡಿಸಿದ ನಿಯಮಗಳ ರೀತ್ಯ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.
6. ಸಾರ್ವಜನಿಕ ಹಿತದ ದೃಷ್ಠಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರಿಕ ಸೌಲಭ್ಯಗಳಾದ ವಿದ್ಯುತ್‌ಚ್ಚಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲಿಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಈ ಎಲ್ಲ ಸೌಲಭ್ಯಗಳನ್ನು ಕಾನೂನು ರೀತ್ಯ ಒದಗಿಸಿ ಕೊಡುವದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.
7. ಈ ಜಮೀನಿಗೆ ತಾಕು ಪೋಟ್ ಖರಾಬ್ ಜಮೀನು ಇದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 67 ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು. ಹಾಗೂ ಪ್ರಸ್ತುತ ಭೂ ಪರಿವರ್ತನೆಗೆ ಒಳಪಟ್ಟಿರುವ ಸರ್ವೆ/ಬ್ಲಾಕ್ ನಂಬರ **149** ರಲ್ಲಿನ **"ಎ"** ಖರಾಬು ವಿಸ್ತೀರ್ಣ **03-ಗುಂ** ಕ್ಕೆ ಮಾರುಕಟ್ಟೆ ದರ ಮತ್ತು ಭೂ ಪರಿವರ್ತನೆ ಶುಲ್ಕ ರೂ. **17100-00** ಪಾವತಿಸಿ ಕೊಳ್ಳಲಾಗಿದ್ದು **ವಸತಿ** ಉದ್ದೇಶಕ್ಕಾಗಿ ಬಳಸಲು ಭೂ ಪರಿವರ್ತನೆ ನೀಡಿದೆ. ಹಾಗೂ ಸರ್ವೆ ನಂಬರ 149 ರಲ್ಲಿ 04-ಗುಂ ಮತ್ತು 151 ರಲ್ಲಿ 01-ಗುಂ ಒಟ್ಟು **05-ಗುಂ** ವಿಸ್ತೀರ್ಣ **"ಬಿ"** ಖರಾಬದಲ್ಲಿ ಬರುವ ಕಾರಣ ಇದನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿರಿಸಲಾಗಿದೆ. ಈ ವಿಸ್ತೀರ್ಣದ ಮೇಲೆ ಅರ್ಜಿದಾರರಿಗೆ ಯಾವುದೇ ಹಕ್ಕು ಇರುವದಿಲ್ಲ. ಈ "ಬಿ" ಖರಾಬಿನ ವಿಸ್ತೀರ್ಣದ ಹಕ್ಕು ಯಾವಾಗಲೂ ಸರ್ಕಾರಕ್ಕೆ ಸೇರಿರುತ್ತದೆ. ತಹಶೀಲ್ದಾರರು ಈ ಬಾಬ್ತು ಆರ್.ಟಿ.ಸಿ.ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.
8. ಸರಕಾರದ ಆದೇಶ ಕ್ರ: ಪಿಡಬ್ಲ್ಯೂಪಿ/362/ಸಿಆರ್‌ಎಂ/98 ದಿನಾಂಕ 09-10-1998 ರಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ಪಟ್ಟಣ ಹಾಗೂ ಶಹರ ಪ್ರದೇಶದಲ್ಲಿ ರಸ್ತೆ ಮಧ್ಯ ಭಾಗದಿಂದ 21 ಮೀಟರ ಹಾಗೂ ನಗರ ಹೊರ ವಲಯದಲ್ಲಿ 40 ಮೀಟರ ರಾಷ್ಟ್ರೀಯ ಹೆದ್ದಾರಿ ನಂಬರ 4 ಕ್ಕೆ ಸಂಬಂಧಿಸಿದಂತೆ ರಸ್ತೆ ಮಧ್ಯ ಭಾಗದಿಂದ 75 ಮೀಟರ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗೆ ಸಂಬಂಧಿಸಿದಂತೆ ರಸ್ತೆ ಮಧ್ಯ ಭಾಗದಿಂದ 40 ಮೀಟರ ಮತ್ತು 25 ಮೀಟರ ಅನುಕ್ರಮವಾಗಿ ಅಂತರವನ್ನು ಕಾಯ್ದಿರಿಸಬೇಕು. ಈ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.
9. ಈ ಭೂ ಪರಿವರ್ತನಾ ಜಮೀನಿನಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳು ಹೊರಕೂಡುವ ಹೊಗೆ, ಅನಿಲ, ಇತರೆ ಕಲ್ಮಶಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತಿಸಿದ ಜಮೀನಿನಲ್ಲಿ ಸ್ಥಾಪಿಸುವ ಕೈಗಾರಿಕಾ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ/ಪರಿಸರ ಇಲಾಖೆಗಳ ಅನುಮತಿ ಪಡೆದಿರುವ ರೀತ್ಯ ಅಥವಾ ಷರ್ತುಗಳನ್ನು ಪೂರೈಸಿದ ನಂತರವೇ ಉಪಯೋಗಿಸಿಕೊಳ್ಳತಕ್ಕದ್ದು.
10. ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆಗೆ ಹೋಗಲು ಸಂಪರ್ಕ ರಸ್ತೆಯನ್ನು ಅನುಮೋದಿತ ಬಡಾವಣೆಯ ನಕ್ಷೆಯಲ್ಲಿ ಇರುವ ರೀತಿಯೇ ನಿರ್ಮಿಸತಕ್ಕದ್ದು.
11. ಸಾರ್ವಜನಿಕ ಉಪಯೋಗಕ್ಕಾಗಿ ನಿಗದಿ ಪಡಿಸಲ್ಪಟ್ಟ ನಿವೇಶನಗಳನ್ನು ಸಂಬಂಧಿತ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ನೋಂದಾವಣೆ ಮಾಡಿಸಿಕೊಡತಕ್ಕದ್ದು.
12. ಬಡಾವಣೆ ರೂಪ ರೇಷಗೆ ಮತ್ತು ನಕ್ಷೆಗೆ ಅನುಮೋದನೆ ನೀಡುವ ಪ್ರಾಧಿಕಾರವು ಬಡಾವಣೆಯಲ್ಲಿ ಮೂಲಭೂತ ಸೌಕರ್ಯಗಳು ಪ್ರಾಧಿಕೃತ ನಿಯಮಗಳಿಗೆ ಅನುಗುಣವಾಗಿ ಇರುವ ಬಗ್ಗೆ ಮತ್ತು ಭೌತಿಕವಾಗಿ ಬಡಾವಣೆ ರಚನೆಯಾಗಿರುವ ಬಗ್ಗೆ ಖಚಿತ ಪಡಿಸಿಕೊಂಡು ನಿಯಮಗಳಂತೆ ಮಾರಾಟಕ್ಕೆ ನಿವೇಶನಗಳನ್ನು ಸದರಿ ಪ್ರಾಧಿಕಾರವು ಬಿಡುಗಡೆ ಪತ್ರ/ಅನುಮತಿ

ಪತ್ರ ನೀಡತಕ್ಕದ್ದು. ಅನುಮತಿ ಪತ್ರವಿಲ್ಲದೇ ನಿವೇಶನ ಪರಭಾರೆ ನಿಷೇಧಿಸಿದೆ.

13. ಭೂ ಪರಿವರ್ತನಾ ಪತ್ರ, ಬಡಾವಣೆ ಅನುಮೋದನೆ ಪತ್ರ, ಅನುಮೋದಿತ ಬಡಾವಣೆ ನಕ್ಷೆ ಹಾಗೂ ಬಡಾವಣೆಯಲ್ಲಿ ಮೂಲಭೂತ ಸೌಕರ್ಯ ಶಾಸನಾತ್ಮಕವಾಗಿ ರಚನೆಯಾದ ಬಗ್ಗ ನೀಡಿದ ಪತ್ರಗಳನ್ನು ಹಾಜರ ಪಡಿಸಿ ನಿವೇಶನಗಳನ್ನು ನೋಂದಾವಣಿ ಮಾಡಿಸಿಕೊಳ್ಳತಕ್ಕದ್ದು.

14. **ಆಯುಕ್ತರು ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ, ಹುಬ್ಬಳ್ಳಿ** ಇವರು ವಿಧಿಸಿದ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

15. **ಪ್ರಸ್ತುತ ಜಮೀನನ್ನು ವಸತಿ ಉದ್ದೇಶಕ್ಕಾಗಿ ಆದೇಶದ ದಿನಾಂಕದಿಂದ ಎರಡು ವರ್ಷದೊಳಗಾಗಿ ಉಪಯೋಗಿಸತಕ್ಕದ್ದು. ಒಂದು ವೇಳೆ ಸದರ ಅವಧಿಯೊಳಗಾಗಿ ಪ್ರಸ್ತಾಪಿತ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸಿ ಉಪಯೋಗಿಸಿಕೊಳ್ಳದೇ ಇದ್ದಲ್ಲಿ ಈ ಆದೇಶವು ತನ್ನಷ್ಟಕ್ಕೆ ತಾನೇ ಅಸಿಂಧುಗೊಳ್ಳುವುದು.**

16. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶವನ್ನು ಯಾವುದೇ ಸೂಚನೆ ನೀಡದೇ ರದ್ದುಗೊಳಿಸಲಾಗುವುದು. ಮತ್ತು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 96 ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೇ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೇ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು. ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿಯೆಂದು ಖಾತೆದಾರರಿಂದ ವಸೂಲಿ ಮಾಡಲಾಗುವುದು.

17. **ಸದರಿ ಜಮೀನಿನಲ್ಲಿ ನೈಸರ್ಗಿಕವಾಗಿ ನೀರು ಹರಿಯುವ ಮಾರ್ಗ ಇದ್ದಲ್ಲಿ, ಸದರಿ ನೀರು ಹರಿಯುವ ಮಾರ್ಗಕ್ಕೆ ಯಾವುದೇ ಅಡೆತಡೆ ಮಾಡತಕ್ಕದ್ದಲ್ಲ ಹಾಗೂ ಹರಿಯ ಮಾರ್ಗವನ್ನು ಬದಲಾಯಿಸತಕ್ಕದ್ದಲ್ಲ. ಇದನ್ನು ಖಚಿತಪಡಿಸಿಕೊಂಡು ನಗರಾಭಿವೃದ್ಧಿ ಪ್ರಾಧಿಕಾರ/ನಗರ ಯೋಜನಾ ಸಹಾಯಕ ನಿರ್ದೇಶಕರು ವಿನ್ಯಾಸವನ್ನು ರಚಿಸಬೇಕು.**

18. **ಈ ಆದೇಶದಂತೆ ಭೂ ಪರಿವರ್ತನೆ ಆದ ಕ್ಷೇತ್ರವನ್ನು ವಿಭಜನೆ, ತುಂಡು ಮಾಡಿ ಪೋಡಿ ಮಾಡಬಾರದು, ಹಾಗೆ ಮಾಡಿದ್ದಲ್ಲಿ ಈ ಆದೇಶ ರದ್ದು ಆದಂತೆ ಭಾವಿಸುವುದು. ಭೂ ಪರಿವರ್ತನೆ ಆದ ಒಟ್ಟು ಕ್ಷೇತ್ರಕ್ಕೆ ವಿನ್ಯಾಸ ಅನುಮೋದನೆ ಪಡೆಯಬೇಕು.**

DEPUTY COMMISSIONER DHARWAD

11/10

ಜಿಲ್ಲಾಧಿಕಾರಿಗಳು, ಧಾರವಾಡ

ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಲಾಗಿದೆ.

1. ತಹಶೀಲದಾರ **ಹುಬ್ಬಳ್ಳಿ** ಇವರಿಗೆ

   2/- ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ/ಬ್ಲಾಕ್ ನಂಬರ ಭೂ ಪರಿವರ್ತನೆಯಾಗಿದೆ ಎಂದು ಸಂಬಂಧಪಟ್ಟ ಆರ್.ಟಿ.ಸಿ.ಯಲ್ಲಿ ನಮೂದಿಸತಕ್ಕದ್ದು. ಮತ್ತು ಈ ಜಮೀನಿಗೆ ಖಾತೆದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು

2. ಆಯುಕ್ತರು ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ, ಹುಬ್ಬಳ್ಳಿ ಇವರಿಗೆ
3. **1. ಶ್ರೀ. ಮಹಮ್ಮದಆಸೀಫ ನಿಜಾಮುದ್ದೀನ ದಗೂದವಾಲೆ 2. ಶ್ರೀ.ಸುಧೀರ ಶಿವಪ್ಪ ಮುದ್ದಿ 3. ಶ್ರೀ. ಮಹಮ್ಮದಶರೀಫ ಅಬ್ದುಲಕರೀಮ ಚಾಮುಂಡಿ 4. ಶ್ರೀ. ನೂಹಾ ಶೇಖ ಬಿನ್ ನೂಹಾ ಶೇಖ ಜಹಾಂಗೀರ 5. ಶ್ರೀ. ಆದಮಖಾನ ಅಸುದುಲ್ಲಾಖಾನ ಕುಜ್ಜೋಡಿ ಸಾ: ಶಬರಿನಗರ, ಹುಬ್ಬಳ್ಳಿ ಇವರಿಗೆ**

ಅಪರ ಜಿಲ್ಲಾಧಿಕಾರಿಗಳು,
ಧಾರವಾಡ ಜಿಲ್ಲೆ, ಧಾರವಾಡ